

# ಮುಖವಾಡಗಳಲ್ಲಿ ಭಾವನೆಗಳ ಅಭಿವ್ಯಕ್ತಿ

ಯಕ್ಷಗಾನ, ರಾಕ್ಷಸ, ಕಥಕಳಿ, ಪ್ರಕೃತಿ ಮತ್ತು ಮರ, ರೌದ್ರ, ದುಃಖ, ಆಕ್ರೋಶ ಇನ್ನಿತರ ಭಾವವನ್ನು ಮುಖವಾಡಗಳ ಮೂಲಕ ಮಕ್ಕಳು ಅನಾವರಣಗೊಳಿಸುವ ಪರಿ ನಿಜಕ್ಕೂ ಬೆರಗು ಹುಟ್ಟಿಸುತ್ತದೆ.

**■ ವಿ.ಎಸ್.ನಾಯಕ ಬಳಕೂರು.**

ಕಲಾ ಶಿಕ್ಷಣಕ್ಕೂ ಪ್ರಕೃತಿಗೂ ಬಹಳ ಹತ್ತಿರವಾದ ನಂಟಿದೆ. ಕಲಾವಿದರಾದವರು ಪ್ರಕೃತಿಯ ಬಗ್ಗೆ ಸರಿಯಾಗಿ ತಿಳಿದಿರುವುದರಿಂದ ಇಲ್ಲಿಯ ಅನೇಕ ವಿಷಯಗಳನ್ನು ಮುಖವಾಡಗಳ ಮೂಲಕ ಬಿಂಬಿಸಿರುವುದು ವಿಶೇಷ. ಅಂದ ಹಾಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ವಿಭಿನ್ನವಾದ ವಿನೂತನ ಕಾರ್ಯ ಮಾಡುವುದರಲ್ಲಿ ಎತ್ತಿದ ಕೈ. ಕಲಾ ಮಹಾವಿದ್ಯಾಲಯದ ಬಿ.ವಿ.ಎ. ಫೌಂಡೇಶನ್ ವಿಭಾಗದ ವಿದ್ಯಾರ್ಥಿಗಳು ಅಚ್ಚರಿ ಹುಟ್ಟಿಸುವಂತಹ ನಿಟ್ಟಿನಲ್ಲಿ ಕಾರ್ಯ ಮಾಡಿರುವುದು ವಿಶೇಷ. ಚಿತ್ರಕಲಾ ಮಹಾ ವಿದ್ಯಾಲಯಕ್ಕೆ ಅಡಿ ಇಟ್ಟವರಿಗೆ ಒಂದು ವಿಸ್ಮಯಕಾರಿ ತಾಣಕ್ಕೆ ಬಂದಿದ್ದೇವೇನೋ ಎಂಬ ಅನುಭವವಾಗುವುದಂತೂ ಸತ್ಯ. ಇದನ್ನು ಕಂಡು ಒಂದು ಕ್ಷಣ ಅಚ್ಚರಿಪಡುವವರೇ ಹೆಚ್ಚು. ಇವಕ್ಕೆಲ್ಲಾ ಕಾರಣ ಬಿ.ವಿ.ಎ. ಫೌಂಡೇಶನ್ ತರಗತಿಯ ವಿದ್ಯಾರ್ಥಿಗಳು ತಮ್ಮ ಕೈಚಳಕದಲ್ಲಿ ರಚಿಸಿದ ವಿಭಿನ್ನ ಮುಖವಾಡಗಳ ಅನಾವರಣ.



ಪ್ರಕೃತಿ ವಿವಿಧ ರೂಪಗಳನ್ನು ನವರಸಗಳ ಮೂಲಕ ಕಲಾತ್ಮಕವಾಗಿ ಬಿಂಬಿಸುವ ಕಾರ್ಯವನ್ನು ಮಾಡಿದ್ದಾರೆ. ಶಿಲ್ಪಕಲೆಯಲ್ಲಿ ಇರುವ ಹಲವಾರು ವಿಧಾನಗಳನ್ನು ಪರಿಚಯಿಸುವ ಕಾರ್ಯ ಈ ಮೂಲಕ ನಡೆದಿದೆ. ವಿದ್ಯಾರ್ಥಿಗಳು ರಚಿಸಿವ ಬಹುತೇಖ ಮುಖವಾಡಗಳು ಪ್ರಕೃತಿಗೆ ಹತ್ತಿರವಾಗಿರುವುದ ರಿಂದಲೂ ಮತ್ತು ಮಾನವನ ವರ್ತನೆಯ ಪ್ರತಿಬಿಂಬವೂ ಇದರಲ್ಲಿರುವು ದರಿಂದ ಇದನ್ನು ಮುಖವಾಡಗಳ ಮೂಲಕ ಚಿತ್ರಿಸಿದರೆ, ಬಹಳ ಹತ್ತಿರದಲ್ಲಿ ಜನರಿಗೆ ತಲುಪಬಹುದು ಎಂಬ ಉದ್ದೇಶವು ಇದರಲ್ಲಿದೆ. ಕಲಾಪ್ರಕಾರದ ಒಂದೊಂದು ಮಜಲುಗಳನ್ನು ಹಂತ ಹಂತವಾಗಿ ತಿಳಿಸಿದರೆ, ಮುಂದೆ ಎಲ್ಲವನ್ನು ತಿಳಿದುಕೊಳ್ಳಲು ಸುಲಭವಾಗುತ್ತದೆ. ಶಿಲ್ಪಕಲೆಯಲ್ಲಿರುವ ವಿವಿಧ ಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಮಾಡಲಾಗಿತ್ತು. ಅದೇ ರೀತಿ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಅವರವರ ಆಸಕ್ತಿಗಳಿಗನುಗುಣವಾಗಿ ಮುಖವಾಡಗಳನ್ನು ಅವಕಾಶ ಮಾಡಿ ಕೊಡಲಾಗಿತ್ತು.

## ಮುಖವಾಡ ತಯಾರಿ ಹೇಗೆ?

ಮೊದಲು ಮಣ್ಣಿನಿಂದ ತಮ್ಮಿಷ್ಟದ ಆಕೃತಿಗಳನ್ನು ರಚಿಸಿಕೊಳ್ಳಬೇಕು. ನಂತರ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಅಚ್ಚು ತಯಾರಿಸಿ ಕಾಗದ ಮತ್ತು ಸೂಕ್ತ ಸಲಕರಣೆಗಳನ್ನು ಬಳಸಿ ಮಾನವನ ಭಾವನೆಗಳನ್ನು ಮತ್ತು ಪ್ರಕೃತಿಯ ವಿವಿಧ ರೂಪಗಳನ್ನು ಚಿತ್ರಿಸಬೇಕು. ಅದಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಬಣ್ಣದ ಲೇಪನ ಮಾಡಬೇಕು.

ಮುಖವಾಡಗಳನ್ನು ತಾಂತ್ರಿಕ ಮತ್ತು ಸೌಂದರ್ಯಾತ್ಮಕವಾಗಿ ರಚಿಸಲು ಕಲಾ ಶಿಕ್ಷಕರು ತರಬೇತಿ ನೀಡುತ್ತಾರೆ. ಫೌಂಡೇಶನ್ ತರಗತಿಯ ನೂರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ವಿಭಿನ್ನ ರೀತಿಯ ಮುಖವಾಡಗಳನ್ನು ರಚಿಸಿದ್ದಾರೆ. ಅದರಲ್ಲಿ ಯಕ್ಷಗಾನ, ರಾಕ್ಷಸ, ಕಥಕಳಿ, ಪ್ರಕೃತಿ ಮತ್ತು ಮರ, ರೌದ್ರ ದುಃಖ ಆಕ್ರೋಶ ಇನ್ನಿತರ ಭಾವವನ್ನು ಅನಾವರಣಗೊಳಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಕ್ರಿಯಾಶೀಲತೆ, ಸ್ವಂತಿಕೆ ಮತ್ತು ಸಮಾಜ ದೊಂದಿಗಿನ ಸಂಬಂಧ ಹೆಚ್ಚುತ್ತದೆ. ಇದನ್ನು ಸುಮಾರು 15 ರಿಂದ 20 ದಿನಗಳವರೆಗೆ ನಡೆದ ಕಾರ್ಯಾಗಾರದಲ್ಲಿ ಮಾಡಿರುವುದು ವಿಶೇಷ. ಫೌಂಡೇಶನ್ ತರಗತಿಯ ವಿದ್ಯಾರ್ಥಿಯಾದ ಶ್ರೇಯಸ್ ಹೇಳುವಂತೆ 'ಕಲಾ ಪ್ರಕಾರದ ವಿಭಿನ್ನ ವಿಷಯಗಳನ್ನು ನೀಡಿ ಇಂತಹ ವಿನೂತನ ರೀತಿಯ ಕಾರ್ಯಾಗಾರ ಮಾಡಿರುವುದರಿಂದ ವಿದ್ಯಾರ್ಥಿಗಳ ಆಲೋಚನಾ ಶಕ್ತಿ ಹೆಚ್ಚುತ್ತದೆ. ಕಲಾಪ್ರಕಾರದ ಪರಿಚಯವಾದಂತಾಗುತ್ತದೆ'

ಕಲಾಶಿಕ್ಷಕರಾದ ವಿಶಾಲ್ ರಾವ್, ಕಾವಟೇಕರ್ ಹೇಳುವ ಪ್ರಕಾರ 'ಇಂತಹ ಕಲಾಪ್ರಕಾರದ ಆಯೋಜನೆ ಶಿಲ್ಪಕಲೆಯಲ್ಲಿರುವ ವಿಭಿನ್ನ ವಿಧಾನಗಳನ್ನು ಪರಿಚಯಿಸುವುದರ ಜೊತೆಗೆ ಅವರನ್ನು ಉತ್ತಮವಾದ ರೀತಿಯಲ್ಲಿ ತಯಾರು ಮಾಡಿದ ಹಾಗೇ ಆಗುತ್ತದೆ. ಕಲಾವಿಕಸನಕ್ಕೆ ಇಂತಹ ಶಿಬಿರಗಳು ಸಹಕಾರಿ'. ■